# ವಿಶ್ವನಂದಿನಿ ಲೇಖನಮಾಲೆ – 76

## ಸಾರಾಮೃತಯುಕ್ತವಾದ ಶ್ರೀ ಹರಿಭಕ್ತಿಸಾರ
## ಮೂವತ್ತೈದನೆಯ ಪದ್ಯ

ಕುರುಕ್ಷೇತ್ರದ ಯುದ್ಧದಲ್ಲಿನ ಮತ್ತೊಂದು ಘಟನೆಯ ಮುಖಾಂತರ ಶ್ರೀಕೃಷ್ಣನ ಮಾಹಾತ್ಮ್ಯವನ್ನು ಚಿಂತಿಸುತ್ತಾರೆ—

ಬವರದಲಿ ಖತಿಗೊಂಡು ಗದೆಯನು
ಕವಿದು ನಿನ್ನ ಶ್ರುತಾಯುಧನು ಹೊ-
ಕ್ಕವಘಡಿಸಿ ಹೊಯ್ದಾಡಿ ತನ್ನಾಯುಧದಿ ತಾ ಮಡಿದ ।
ವಿವರವೇನೋ ತಿಳಿಯೆನೀ ಮಾ
ಯವನು ನೀನೇ ಬಲ್ಲೆ ನಿನ್ನಾ-
ಯವನು ಬಲ್ಲವರುಂಟೆ ರಕ್ಷಿಸು ನಮ್ಮನನವರತ ॥ ೩೫ ॥

'ಬವರದಲಿ' ಯುದ್ಧದಲ್ಲಿ
'ಖತಿಗೊಂಡು' ತೀವ್ರ ಸಿಟ್ಟಿಗೊಳಗಾಗಿ
'ಶ್ರುತಾಯುಧನು' ವರುಣ ಪರ್ಣಾಶೆಯರ
ಮಗನಾದ ಆ ಹೆಸರಿನ ರಾಜ

‘ಗದೆಯನು[1]’ ಗದೆಯನ್ನು
‘ಕವಿದು’ ಧರಿಸಿ ಗದೆಯನ್ನು ಹೊತ್ತು ಎಂದರ್ಥ,
‘ಹೊಕ್ಕು’ ಅರ್ಜುನನ ರಥವನ್ನು ಏರಿ
‘ನಿನ್ನ ತನ್ನಾಯುಧ ಅವಘಡಿಸಿ’ ನಿನ್ನನ್ನು ತನ್ನ
ಗದೆಯಿಂದ ಹೊಡೆದು ಬಳಿಕ
‘ಹೊಯ್ದಾಡಿ’ ವಿಲವಿಲನೇ ಒದ್ದಾಡಿ
‘ತನ್ನಾಯುಧದಿ’ ತನ್ನ ಗದೆ ಎಂಬ ಆಯುಧದಿಂದ
‘ತಾ’ ತಾನೇ
‘ಮಡಿದ’ ಸತ್ತುಬಿದ್ದ.
‘ಈ ವಿವರವೇನೋ ತಿಳಿಯೆನು’ ಇದರ ವಿವರ
ಏನೆಂಬುದನ್ನು ನಾ ತಿಳಿಯೆ,
‘ಮಾಯವನು ನೀ ಬಲ್ಲೆ’ ರಹಸ್ಯವನು ನೀನೇ ಬಲ್ಲೆ,
‘ನಿನ್ನ ಆಯವನು’ ರಹಸ್ಯವನು
‘ಬಲ್ಲವರುಂಟೇ’ ತಿಳಿದವರಿದ್ದಾರೆಯೇ ?
‘ನಮ್ಮನು’ ಸಜ್ಜನರನ್ನು ‘ಅನವರತ ರಕ್ಷಿಸು.’

ಶ್ರುತಾಯುಧ ಕೌರವರ ಪಂಗಡದಲ್ಲಿದ್ದ
ಮಹಾವೀರ. ವರುಣ ಮತ್ತು ಪರ್ಣಾಶಾನದಿಯರ
ಮಗ. ವರುಣನಿಂದ ಈ ಮಗನನ್ನು ಪಡೆದ

[1] ಗದೆಯೊಳು ಎಂಬ ಪಾಠ ತಪ್ಪು

ವರವನ್ನು ನೀಡಲು ವರುಣನನ್ನು ಬೇಡುತ್ತಾಳೆ. ಆದರೆ, ಮರ್ತ್ಯಲೋಕದಲ್ಲಿ ಅದು ಸಾಧ್ಯವಿಲ್ಲವೆಂದು ವರುಣ ಪರ್ಣಾಶೆಗೆ ತಿಳಿಹೇಳುತ್ತಾನೆ. ಆದರೆ, ಪರ್ಣಾಶೆ ಮತ್ತೆಮತ್ತೆ ಬೇಡಿದಾಗ ಶ್ರುತಾಯುಧನಿಗೆ ಒಂದು ಗದೆಯನ್ನು ಮಂತ್ರಪುರಸ್ಸರವಾಗಿ ನೀಡುತ್ತಾನೆ. ಈ ಗದೆಯನ್ನು ಹಿಡಿದು ಯುದ್ಧ ಮಾಡುವ ನಿನ್ನನ್ನು ಗೆಲ್ಲಲು ಯಾರಿಗೂ ಸಾಧ್ಯವಿಲ್ಲ ಎಂಬ ವರವನ್ನೂ ನೀಡುತ್ತಾನೆ. ಅದರ ಜತೆಯಲ್ಲಿಯೇ, ಯುದ್ಧ ಮಾಡದ ವ್ಯಕ್ತಿಯ ಮೇಲೆ ನೀನು ಈ ಗದೆಯಿಂದ ಪ್ರಹಾರವನ್ನು ಮಾಡಿದಲ್ಲಿ ನಿನ್ನನ್ನೇ ಈ ಗದೆ ಕೊಲ್ಲುತ್ತದೆ ಎಂದೂ ಸ್ಪಷ್ಟವಾಗಿ ಹೇಳಿಬಿಡುತ್ತಾನೆ. “ಅಯುಧ್ಯತಿ ನ ಮೋಕ್ತವ್ಯಾ ಸಾ ತ್ವಯ್ಯೇವ ಪತೇದಿತಿ”

ಹೀಗೆ ತಂದೆಯಾದ ವರುಣನಿಂದ ಈ ದಿವ್ಯವಾದ ಅಮೋಘವಾದ ಗದೆಯನ್ನು ಪಡೆದ ಶ್ರುತಾಯುಧ ಅಜೇಯನಾದ ವೀರನಾಗಿರುತ್ತಾನೆ. ಹದಿನಾಲ್ಕನೆಯ ದಿವಸದ ಯುದ್ಧದ ಆರಂಭದಲ್ಲಿಯೇ ಇವನು ದೃಢಾಯು, ಅಚ್ಯುತಾಯು, ವಿಂದ, ಅನುವಿಂದ, ಸುದಕ್ಷಿಣ

ಇವರೊಡಗೂಡಿ ಅರ್ಜುನನ ಮೇಲೆರಗಿ ಬರುತ್ತಾನೆ. ಸೈಂಧವನನ್ನು ಕೊಲ್ಲುವ ತವಕವಿದ್ದ ಅರ್ಜುನ ಅತೀ ಬೇಗನೆ ನಿರಾಯಾಸವಾಗಿ ಉಳಿದೆಲ್ಲರನ್ನೂ ಕೊಂದು ಶ್ರುತಾಯುಧನ ಮೇಲೆ ಅಸ್ತ್ರಗಳ ಮಳೆಯನ್ನೇ ಸುರಿಸಿಬಿಡುತ್ತಾನೆ. ಕುಪಿತನಾದ ಶ್ರುತಾಯುಧ ಒಮ್ಮೆಲೇ ಎಪ್ಪತ್ತೇಳು ನಾರಾಚಗಳನ್ನು ಅರ್ಜುನನ ಮೇಲೆ ಪ್ರಯೋಗಿಸುತ್ತಾನೆ. ಅವನ್ನು ಮಧ್ಯದಲ್ಲಿಯೇ ಮುರಿದು ಹಾಕಿದ ಅರ್ಜುನ ಶ್ರುತಾಯುಧನ ಬಿಲ್ಲನ್ನೇ ಕತ್ತರಿಸಿ, ಬತ್ತಳಿಕೆಯನ್ನು ಮುರಿದು ಮಧ್ಯದಲ್ಲಿ ಬಾಗಿಸಿದ ಏಳು ಬಾಣಗಳಿಂದ ಅವನ ಎದೆಗೇ ಹೊಡೆಯುತ್ತಾನೆ. ಹೆಡೆ ತುಳಿದ ಹಾವಿನಂತಾದ ಶ್ರುತಾಯುಧ ಮತ್ತೊಂದು ಬಿಲ್ಲನ್ನು ತೆಗೆದುಕೊಂಡು ಅರ್ಜುನನ ಎದೆಗೆ ಒಮ್ಮೆಲೇ ಒಂಭತ್ತು ಬಾಣಗಳನ್ನು ಪ್ರಯೋಗಿಸುತ್ತಾನೆ. ಅದರಿಂದ ವಿಚಲಿತನಾಗದ ಅರ್ಜುನ ನೂರಾರು ಬಾಣಗಳನ್ನು ಒಮ್ಮೆಲೇ ಪ್ರಯೋಗಿಸಿ ಅವನಿಗೆ ದಿಕ್ಕುಗಾಣದ ಹಾಗೆ ಮಾಡಿ ಅವನ ರಥದ ಕುದುರೆಗಳನ್ನು ಸಾರಥಿಯನ್ನೂ ಕೊಂದು ಬಿಡುತ್ತಾನೆ. ಹೀಗೆ ಕುದುರೆ ಸಾರಥಿಯನ್ನು

ಕಳೆದುಕೊಂಡು ವಿರಥನಾದ ಶ್ರುತಾಯುಧ ಕೋಪದ ಪರಾಕಾಷ್ಠೆಯನ್ನು ತಲುಪಿ ತನ್ನ ತಂದೆಯಿತ್ತ ಗದೆಯನ್ನು ಕೈಯಲ್ಲಿ ತೆಗೆದುಕೊಂಡು ಅರ್ಜುನನ ರಥವನ್ನೇರಿ ಅರ್ಜುನನಿಗೆ ಅದರಿಂದ ಹೊಡೆಯದೇ ಸಾರಥಿಯಾದ ಯುದ್ಧಮಾಡದ ಶ್ರೀಕೃಷ್ಣನಿಗೆ ಹೊಡೆದು ಬಿಡುತ್ತಾನೆ. ಕೈಯಲ್ಲಿ ಆಯುಧಗಳನ್ನು ಹಿಡಿದು ಯುದ್ಧ ಮಾಡದ, ಆದರೆ ಯುದ್ಧರಂಗದಲ್ಲಿ ಅವಶ್ಯವಾಗಿ ಭಾಗವಹಿಸಲೇ ಬೇಕಾದ ಸಾರಥಿ, ವೈದ್ಯ, ಶಸ್ತ್ರವಾಹಕ ಮುಂತಾದವರಿಗೆ ಈ ಗದೆಯಿಂದ ಹೊಡೆದರೆ ಇದೇ ಗದೆಯೇ ನಿನ್ನನ್ನು ಕೊಲ್ಲುತ್ತದೆ ಎಂಬ ವರುಣನ ಮಾತಿನಂತೆ ತಿರುಗಿ ಬಂದ ಆ ಗದೆ ಶ್ರುತಾಯುಧನ ತಲೆಯನ್ನೇ ಸೀಳಿ ಅವನನ್ನು ಕೊಲ್ಲುತ್ತದೆ. “ಬಿಭೇದ ಶತಧಾ ಶೀರ್ಣಮಸ್ತಿಷ್ಕಃ ಸೋಧಿಪತದ್ ಭುವಿ”

ವಿವರವೇನೋ ತಿಳಿಯದು ಎಂಬ ದಾಸರ ಮಾತಿಗೆ ಮೇಲಿನ ಕಥೆ ಅವರಿಗೆ ತಿಳಿಯದು ಎಂದಲ್ಲ. ಶ್ರೀಮದಾಚಾರ್ಯರ ಮಹಾಭಾರತತಾತ್ಪರ್ಯನಿರ್ಣಯದ ಮತ್ತು ಮಹಾಭಾರತದ ಆಳವಾದ ಜ್ಞಾನವುಳ್ಳವರು ಅವರು. ಈ ಮಾತಿಗೆ ನಿದರ್ಶನವನ್ನೂ ನಾವು ಈ

ಹಿಂದೆಯೇ ನೋಡಿದ್ದೇವೆ[2]. ಈ ಕಥೆ ತಿಳಿದಿದ್ದೂ ದಾಸರು ವಿವರವೇನೋ ತಿಳಿಯದು, ನಿನ್ನ ಆಯವನು ನಿನ್ನ ಗುಟ್ಟನ್ನು ಬಲ್ಲವರುಂಟೇ ಎನ್ನುತ್ತಾರೆ. ಅದಕ್ಕೊಂದು ಮಹತ್ತ್ವದ ಕಾರಣವಿದೆ. ಮೇಲಿನ ಕಥೆ ಮಹಾಭಾರತದಲ್ಲಿಯೇ ಇದೆ, ಶ್ರೀಮದಾಚಾರ್ಯರು ನಿರ್ಣಯಿಸಿಯೂ ಇದ್ದಾರೆ ಆದ್ದರಿಂದ ಅದೇನೂ ರಹಸ್ಯವಲ್ಲ. ಆದರೆ, ಅರ್ಜುನನ ಪರಾಕ್ರಮವನ್ನು ಸಹಿಸದೆ, ತನ್ನೆಲ್ಲ ಪರಾಕ್ರಮವೂ ಅವನ ಪರಾಕ್ರಮದ ಮುಂದೆ ನೀರಸವಾದದ್ದನ್ನು ಕಂಡು ಅರ್ಜುನನ ಮೇಲೆ ಕುಪಿತನಾಗಿ ಅರ್ಜುನನನ್ನು ಕೊಲ್ಲಲೆಂದೇ ಅರ್ಜುನನ ರಥವನ್ನು ಏರಿಬಂದ ಶ್ರುತಾಯಧ ಅರ್ಜುನನಿಗೆ ಗದೆಯಿಂದ ಹೊಡೆಯದೇ ಕೃಷ್ಣನಿಗೆ ಗದೆಯಿಂದ ಹೊಡೆಯಲು ಕಾರಣವೇನು ? ಕೃಷ್ಣನೇನಾದರೂ ಅವನನ್ನು ಹೀಯಾಳಿಸಿದ್ದರೆ, ಕೃಷ್ಣನಿಂದೇನಾದರೂ ಅವನಿಗೆ ತೊಂದರೆಯಾಗಿದ್ದರೆ ಕೃಷ್ಣನನ್ನು ಹೊಡೆಯಲು ಕಾರಣವಿತ್ತು. ಆದರೆ ಕೃಷ್ಣನಿಗೂ ಅವನಿಗೂ ಯಾವ

---

[2] ಮೂವತ್ತನೆಯ ಶ್ಲೋಕದಲ್ಲಿನ ಪೂತನಿಯ ಕುರಿತಾದ ದಾಸರ ಮಾತಿನ ವಿವರಣೆಯನ್ನು ನೋಡಿ.

ಸಂಬಂಧವೂ ಇಲ್ಲ. ಆದರೂ ರಥವನ್ನೇರಿ ಬಂದ ಶ್ರುತಾಯುಧ ಕೃಷ್ಣನಿಗೆ ಹೊಡೆಯುತ್ತಾನೆ. ಇದಕ್ಕೆ ಕಾರಣವೇನು? ಶ್ರೀಮದಾಚಾರ್ಯರು ಹೇಳಿಲ್ಲ, ನಮಗೆ ತಿಳಿಯುವ ಸಾಧ್ಯತೆಯಿಲ್ಲ. ಅರ್ಜುನನನ್ನು ರಕ್ಷಿಸುವದಕ್ಕಾಗಿ ಭಗವಂತ ಹೀಗೆ ಪ್ರೇರಣೆ ಮಾಡಿದ ಎನ್ನುವದು ಸರಿ. ಆದರೆ, ಈ ಗದೆ ಇರುವವರೆಗೆ ನಿನ್ನನ್ನು ಯಾರೂ ಗೆಲ್ಲಲಾಗುವದಿಲ್ಲ ಎಂಬ ವರವನ್ನು ವರುಣ ನೀಡಿದ್ದರೆ ಸಾಕಿತ್ತು. ವರುಣನ ವರವನ್ನು ನಿರಾಯಾಸವಾಗಿ ಮೀರುವ ಸಾಮರ್ಥ್ಯ ಅರ್ಜುನನಿಗಿತ್ತು. ಹೀಗಾಗಿ ಆ ಗದೆಯನ್ನು ಮೋಘಗೊಳಿಸಿ ಶ್ರುತಾಯುಧನನ್ನು ಅರ್ಜುನನೇ ಕೊಲ್ಲಬಹುದಿತ್ತು. ವರುಣ ಆ ರೀತಿಯಾಗಿ ವಿಚಿತ್ರ ನಿಬಂಧನೆಯನ್ನು ಒಡ್ಡಲು ಕಾರಣವೇನು ? ತಂದೆ ಹೇಳಿದ ಮಾತನ್ನು ಮರೆತು ಕೃಷ್ಣನ ಮೇಲೆ ಪ್ರಯೋಗ ಮಾಡಲು ಶ್ರುತಾಯುಧನಿಗಾದರೂ ಏನು ಕಾರಣವಿತ್ತು ? ಉತ್ತರ ಗೊತ್ತಿಲ್ಲ. ಅದನ್ನೇ ದಾಸರು ಹೇಳಿದ್ದು -- ವಿವರವೇನೋ ತಿಳಿಯೆನು ಈ ಮಾಯವನು ನೀನೇ ಬಲ್ಲೆ ನಿನ್ನಾಯವನು ಬಲ್ಲವರುಂಟೇ ರಕ್ಷಿಸು ನಮ್ಮನನವರತ.

ಈ ಮಾತು ಕನಕದಾಸರಷ್ಟೇ ಅಲ್ಲ ಶ್ರೀ ತ್ರಿವಿಕ್ರಮಪಂಡಿತಾಚಾರ್ಯರೂ ಸಹಿತ ಹೇಳುತ್ತಾರೆ. **“ಶ್ರೀಮದಾನಂದತೀರ್ಥ ಶ್ರೀಮನ್ನಾಮನ್ ಸಮರ್ಥಃ ತ್ವಮಪಿ ಹಿ ಯುವಯೋಃ ಪಾದಪದ್ಮಂ ಪ್ರಪದ್ಯೇ”** ಕುರುಕ್ಷೇತ್ರದ ಯುದ್ಧದಲ್ಲಿ ನಡೆದ ಒಂದೊಂದು ಘಟನೆಯನ್ನೂ ಪೂರ್ಣವಾಗಿ ಬಲ್ಲವರು ಇಬ್ಬರೇ ಒಂದು ಶ್ರೀಕೃಷ್ಣ, ಎರಡನೆಯದು ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯರು. ಮಹಾಭಾರತದಲ್ಲಿರುವದನ್ನು, ತಾತ್ಪರ್ಯನಿರ್ಣಯದಲ್ಲಿ ಆಚಾರ್ಯರು ನಿರ್ಣಯಿಸಿರುವದನ್ನು ಮಾತ್ರ ನಾವು ತಿಳಿಯಬಲ್ಲೆವು. ಆ ಗ್ರಂಥಗಳಲ್ಲಿರುವ ಒಳಾರ್ಥಗಳನ್ನು ಪೂರ್ಣ ತಿಳಿಯುವ ಯೋಗ್ಯತೆಯೇ ನಮ್ಮದಲ್ಲ. ‖ ೩೫ ‖

— ವಿಷ್ಣುದಾಸ ನಾಗೇಂದ್ರಾಚಾರ್ಯ